ಓದೋದಕ್ಕೆ ಲೈನಿಂದ ಕರೆಂಟ್ ಎಳೆದುಕೊಂಡದ್ದನ್ನ ಬಿಟ್ಟರೆ ಬೇರೆ ಏನೂ ಕಳ್ಳತನ ಮಾಡಿಲ್ಲ ಸರ್, ಅದನ್ನು ನಾಳೆ ತೆಗೆದು ಬಿಡ್ತೀನಿ. ಈಗ ಬಿಟ್ಟು ಬಿಡಿ ಸರ್. ಮನೆಯವರಿಗೆ ಗೊತ್ತಾದರೆ ಮೂರುದಿನ ನಿದ್ದೆಮಾಡಲಿಕ್ಕಿಲ್ಲ ಸರ್. ಮಾನ ಹೋಗಿಬಿಡುತ್ತೆ ಸರ್. ಯಾರು ಕೆಲಸಕ್ಕೆ ಕರೆಯಲಿಕ್ಕಿಲ್ಲ" ಎಂದು ಬಿಕ್ಕಿದ.

ಅವನ ಹೆಸರು ಕೇಳಿ, ಇಡಿಯ ಠಾಣೆ ಗೊಳ್ ಎಂದು ನಕ್ಕಿತು. ತಮ್ಮ ಸರದಿಗೆ ಠಾಣೆಯ ಕೋಣೆಯಲ್ಲಿ ಹೆದರಿ ನಿಂತಿದ್ದ ಒಂದೆರಡು ಮಂದಿ ಕೂಡಾ ಅದಕ್ಕೆ ಧ್ವನಿ ಕೂಡಿಸಿದರು. ಹೊಡೆಯಲು ಕೈ ಎತ್ತಿದ ಗೊವಿಂದ ಯಾಕೋ ಕೈ ಕೆಳಗಿಳಿಸಿ ಸುಮ್ಮನೆ ನಿಂತ. ದಿನ ನಿತ್ಯ ನಡೆವ ಸರಗಳ್ಳತನದ ಬಗೆಗೆ ಬರುವ ದೂರುಗಳು ಈಗ ಕಾನೂನು ಪಾಲಕರ ಮುಖ್ಯ ಸಮಸ್ಯೆಯಾಗಿ ಬದಲಾಗಿತ್ತು. ದಿನ ಬೆಳಗಾದರೆ ಟೀವಿಯವರ ಹಾವಳಿ ಬೇರೆ. "ಕಾಲೇಜಿಗೆ ಹೋಗುವ ಹೆಣ್ಣು ಮಕ್ಕಳ ಸರವನ್ನೇ ಯಾಕೆ ಇವರು ಕದಿಯುತ್ತಾರೆ. ಜಯನಗರದ ಪೊಲೀಸರಿಗೆ ಗಂಡಸ್ಥನವಿಲ್ಲವೆ? ಪಾಂಟಾ ಕುಡಿಯುವ ಪೊಲೀಸ್ ಪೇದೆಗಳು ಸರಗಳ್ಳರನ್ನ ಹಿಡಿಯಲಾರರೆ? ಇದೆಲ್ಲವನ್ನು ವೀಕ್ಷಕರೆ, ನೀವು ನೋಡಿ ಒಂದು ಬ್ರೇಕ್ ನಂತರ." "ಸುದ್ದಿ ಗೌರಿ ವಿಥ್ ಕ್ಯಾಮರಮನ್ ಮುರುಗೇಶನ್" ಎನ್ನುವ ಅಡಿ ಟಿಪ್ಪಣಿ ಬೇರೆ. ಸಾಲದುದಕ್ಕೆ ಮೊನ್ನೆ ವಿಧಾನ ಸೌಧದಲ್ಲಿಯೂ ಇದು ಚರ್ಚೆಗೆ ಬಂದಿತ್ತು.

ಹೊಡೆಯುವದನ್ನ ನಿಲ್ಲಿಸಿ ಗೋವಿಂದ ಸರಿದು ನಿಂತ. ಮೊಬೈಲ್ ಮತ್ತೆ ಗುಣಗುಣಿಸಿತು. ಆ ಕಡೆಯಿಂದ ಡಿವೈಎಸ್ಪಿ. "ಯಾಕೋ ಗೋವಿಂದ, ಯಾರನ್ನೋ ತಂದು ತದುಕುತ್ತಿರುವಿಯಂತೆ. ಇಲ್ಲಿ ನನ್ನ ಕಚೇರಿಗೆ ಹೆಂಗಸೊಬ್ಬಳು ಬಂದು ಬಾಯಿ ಬಡಿದುಕೊಳ್ಳುತ್ತಿದೆ. ಅವಳೊಬ್ಬಳೇ ಅಲ್ಲ. ಅವಳ ಜೊತೆ ಇನ್ನೂ ನಾಲ್ಕೈದು ಮಂದಿ. ಆ ಏರಿಯಾದಲ್ಲಿ ಆರುನೂರು ವೋಟುಗಳಿವೆ. ಎಲೆಕ್ಷನ್ ಟೈಮು ಬೇರೆ. ಮನೆಗೆ ಕಳ್ಸು, ಮತ್ತೆ ಸ್ವಲ್ಪ ಕೈ ಕೆಳಗೆ ಇರಲಿ." ಫೋನ್ ಕಟ್ಟಾಯಿತು.

"ತತ್ತರಿಕೆ" ಎಂದ ಗೋವಿಂದ. ಮತ್ತೆರಡು ತದಕಲೆ ಎಂದು ಕೈ ಎತ್ತಿದವನಿಗೆ ಟೀ ಶರ್ಟ್‌ನಲ್ಲಿ ಅರ್ಧ ಹರಿದ ಸಲ್ಮಾನ ಖಾನ್ ಕಂಡು ಬೇಡಾ ಎಂದು ಕೈ ಇಳಿಸಿದ. "ಬೋಸುಡುಕಿ ಈ ಬಾರಿ ಬಿಡುತ್ತಿದ್ದೀನಿ. ಯಾರಾದರೂ ಸರ ಹರಿದಿದ್ದು ಕಂಡರೆ ನನಗೆ ಬಂದು ಹೇಳಬೇಕು ಗೊತ್ತಾಯ್ತು" ಅಂದ.

"ಸರ್" ಎಂದು ಸಮುದ್ರ ನಿಂತ. "ಒಂದು ಬಕೆಟ್ ನೀರುಕೊಟ್ಟರೆ ತೊಳೆದು ಕ್ಲೀನ್ ಮಾಡ್ತೀನಿ" ಅಂದ. ಗೋವಿಂದನಿಗೆ ತಲೆಕೆಟ್ಟಂತಾಗಿ, ''ಮಗನೆ ನಿನ್ನ ಅದೃಷ್ಟ ಚೆನ್ನಾಗಿತ್ತು. ಸುಮ್ನೆ ಮುಚ್ಕೊಂಡು ಹೋಗು,'' ಎಂದು ಗದರಿದ.

ಠಾಣೆಯಿಂದ ಹೊರಗೆ ಕಾಲಿಟ್ಟ ಸಮುದ್ರ ಮತ್ತೆ ತಿರುಗಿ ಬಂದು ಗೋವಿಂದನ ಮುಂದೆ ನಿಂತ. ''ಸರ್... ನಾನು ಯಾವ ಸುಳ್ಳು ಹೇಳಲಿಲ್ಲ. ಮಗನಿಗೆ ಓದಲು ಅನುಕೂಲವಾಗಲಿ ಎಂದು ವಿದ್ಯುತ್ ಕದ್ದದ್ದು ನಿಜ... ಸರ್...'' ಎಂದು ತಡಬಡಾಯಿಸಿದ. ಮತ್ತೆ ಹೇಳಲೊ ಬೇಡವೊ ಎಂದು ಅಂಜುತ್ತಲೆ, ತನ್ನ ಅರ್ಧ ಹರಿದ ಪ್ಯಾಂಟಿನ ಜೋಬಿನಿಂದ ರಾಜ್ಯದ ಮುಖ್ಯ ದೈನಿಕವೊಂದರ ಹಾಳೆಯನ್ನು ಗೋವಿಂದನ ಮೇಜಿನ ಮೆಲೆ ಉದ್ದಕ್ಕೆ ಹರಡಿದ. 'ಕೂಲಿ ಮಗನ ವಿಜಯ ಯಾತ್ರೆ' ಎನ್ನುವ ತಲೆಬರಹದಡಿ ಬಿಳಿ ಅಂಗಿ ಮತ್ತು ಬಿಳಿ ಲುಂಗಿಯಲ್ಲಿ ಸಮುದ್ರ ಅವನ ಪಕ್ಕ ಹಸಿರು ಸಿರೆ ಉಟ್ಟ ಮುಖತುಂಬ ಅರಿಸಿನ ಹಚ್ಚಿಕೊಂಡ ಹೆಂಗಸು, ಅವರ ಮುಂದೆ ಸ್ವಲ್ಪ ನಾಚಿಕೆಯಿಂದಲೆ ನಿಂತ ಒಬ್ಬ ಹುಡುಗ. ''ಸರ್... ಇವನು ನಮ್ಮ ಮಗ ವೀರಬಾಹು. ಐಐಟಿ ಚೆನ್ನೈಯಲ್ಲಿ ಸೀಟು ಸಿಕ್ಕಿದೆ. ನಮ್ಮ ದೇವರ ಭಾಗ್ಯ ನೋಡಿ ಸರ್. ಎಂತಾ ಮಳ್ಳು ತಂದೆಯಲ್ಲಿ ಎಂತಹ ಮಗ. ಅವನಿಗೆ ಎರಡು ಹೊತ್ತು ಊಟ ಕೊಡಲು ನನ್ನಿಂದ ಆಗಲಿಲ್ಲ."